ಆ) ಹಾಗಿದ್ದರೆ, ಈ ಹಳೆಯ ಶಾಲಾ ಕಟ್ಟಡಗಳ ದುರಸ್ತಿ ಕಾರ್ಯವನ್ನು ಯಾವ ಯಾವ ಇಲಾಖೆಯವರು ಮಾಡಬೇಕು;

ಇ) ನಗರ ಹಾಗೂ ಗ್ರಾಮಾಂತರ ಶಾಲೆಗಳ ದುರಸ್ತಿಗಾಗಿ 2003–04ನೇ ಸಾಲಿನಲ್ಲಿ ಖರ್ಚಾಗಿರುವ ಹಣ ಎಷ್ಟು?

ಶ್ರೀ ಆರ್. ರಾಮಲಿಂಗರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಬಂದಿದೆ.

ಆ) ಜಿಲ್ಲಾಪಂಚಾಯತ್ ಇಂಜಿನಿಯರಿಂಗ್ ವಿಭಾಗ/ ಭೂಸೇನಾ ನಿಗಮ/ ಶಾಲಾ ಅಭಿವೃದ್ಧಿ ಹಾಗೂ ಉಸ್ತುವಾರಿ ಸಮಿತಿ/ ಅಥವಾ ನಿರ್ಮಿತಿ ಕೇಂದ್ರಗಳು.

ಇ) 2003–04ನೇ ಸಾಲಿನಲ್ಲಿ ರಾಜ್ಯವಲಯದ ಯೋಜನೇತರದಡಿಯಲ್ಲಿ ರೂ.741.70 ಲಕ್ಷಗಳನ್ನು ಹಾಗೂ ಪ್ರಧಾನಮಂತ್ರಿ ಗ್ರಾಮಾಂತರ ಯೋಜನೆಯಡಿ ರೂ.141.80 ಲಕ್ಷಗಳನ್ನು ಗ್ರಾಮಾಂತರ ಹಾಗೂ ನಗರ ಶಾಲೆಗಳ ದುರಸ್ತಿಗಾಗಿ ಖರ್ಚುಮಾಡಲಾಗಿದೆ.

2479(3141) ಶ್ರೀ ಈಶ್ವರಪ್ಪ ಕೆ.ಎಸ್. (ಶಿವಮೊಗ್ಗ):–ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ನಗರಕ್ಕೆ ಸರ್ಕಾರಿ ಕಲಾ ಮತ್ತು ವಿಜ್ಞಾನ ಕಾಲೇಜಿನ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಶಿವಮೊಗ್ಗದಲ್ಲಿದ್ದ ಸರ್ಕಾರಿ ಸಹ್ಯಾದ್ರಿ ಕಾಲೇಜು ಈಗ ಕುವೆಂಪು ವಿಶ್ವವಿದ್ಯಾಲಯಕ್ಕೆ ಸೇರುವುದರಿಂದ ಬಡ ವಿದ್ಯಾರ್ಥಿಗಳಿಗೆ ತುಂಬ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದರೆ, ಶಿವಮೊಗ್ಗದಲ್ಲಿ ಬರುವ ಶೈಕ್ಷಣಿಕ ವರ್ಷದಿಂದ ಸರ್ಕಾರಿ ಕಾಲೇಜು ಆರಂಭಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ?

ಶ್ರೀ ಡಿ. ಮಂಜುನಾಥ (ಉನ್ನತ ಶಿಕ್ಷಣ ಸಚಿವರು):

ಅ) ಹೌದು.

ಆ) ಬಂದಿಲ್ಲ.

ಇ) ಶಿವಮೊಗ್ಗದಲ್ಲಿ ಸರ್ಕಾರಿ ಪದವಿ ಕಾಲೇಜನ್ನು ಪ್ರಾರಂಭಿಸುವ ಕುರಿತಂತೆ, ಹಣದ ಲಭ್ಯತೆ, ಮೂಲಭೂತ ಸೌಕರ್ಯ ಹಾಗೂ ಅವಶ್ಯಕತೆಯ ಆಧಾರದ ಮೇಲೆ ಪರಿಶೀಲಿಸಲಾಗುವುದು.

2480(3142) ಶ್ರೀ ಈಶ್ವರಪ್ಪ ಕೆ.ಎಸ್. (ಶಿವಮೊಗ್ಗ):–ಮಾನ್ಯ ವಸತಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಕೊಳಚೆ ಪ್ರದೇಶಗಳು ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು);

ಆ) ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರ ಕೈಗೊಂಡ ಯೋಜನೆಗಳು ಯಾವುವು;

ಇ) ಶಿವಮೊಗ್ಗ ನಗರದಲ್ಲಿರುವ ಕೊಳಚೆ ಪ್ರದೇಶಗಳು ಎಷ್ಟು;

ಈ) ಈ ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ಕೈಗೊಂಡಿರುವ ಕ್ರಮಗಳೇನು ಹಾಗೂ ಎಷ್ಟು ಹಣ ಮೀಸಲಿಡಲಾಗಿದೆ?

ಶ್ರೀ ಅಂಜನ ಮೂರ್ತಿ (ವಸತಿ ಸಚಿವರು):

ಅ) ರಾಜ್ಯದಲ್ಲಿ 2509 ಕೊಳಚೆ ಪ್ರದೇಶಗಳಿವೆ. ವಿವರಗಳನ್ನು ಅನುಬಂಧ–"ಅ" ನಲ್ಲಿ ಒದಗಿಸಲಾಗಿದೆ.

ಆ) ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ರಾಜ್ಯ ಸರ್ಕಾರ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

1. ನಿರ್ಮಲಜ್ಯೋತಿ ಯೋಜನೆ (21 ಪ್ರಥಮ ದರ್ಜೆ ನಗರಗಳಲ್ಲಿ ಮಾತ್ರ)
2. ಕೊಳಚೆ ಪ್ರದೇಶಗಳ ಅಭಿವೃದ್ಧಿ ಯೋಜನೆ.
3. ವಾಲ್ಮೀಕಿ ಅಂಬೇಡ್ಕರ್ ಆವಾಸ್ ಯೋಜನೆ (ಕೇಂದ್ರ ಪುರಸ್ಕೃತ)

ಇ) ಶಿವಮೊಗ್ಗ ನಗರದಲ್ಲಿ 39 ಕೊಳಚೆ ಪ್ರದೇಶಗಳಿವೆ.

ಈ) ಈ ಕೊಳಚೆ ಪ್ರದೇಶಗಳ ಅಭಿವೃದ್ಧಿಗೆ ನಿರ್ಮಲಜ್ಯೋತಿ ಯೋಜನೆಯ ಮೊದಲನೆ ಹಂತದಲ್ಲಿ 9 ಕೊಳಚೆ ಪ್ರದೇಶಗಳಲ್ಲಿ ರೂ. 211.19 ಲಕ್ಷಗಳ ವೆಚ್ಚದಲ್ಲಿ ಮೂಲಭೂತ ಸೌಕರ್ಯಗಳನ್ನೊಳಗೊಂಡ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

ವಾಲ್ಮೀಕಿ ಅಂಬೇಡ್ಕರ್ ಆವಾಸ್ ಯೋಜನೆಯಡಿಯಲ್ಲಿ 111 ಮನೆಗಳನ್ನು ರೂ. 44.40 ಲಕ್ಷಗಳ ಅಂದಾಜಿನಲ್ಲಿ ಕೈಗೊಂಡು ಪೂರ್ಣಗೊಳಿಸಲಾಗಿದೆ.

ಸರ್ಕಾರದಿಂದ ಆಯಾ ಯೋಜನೆಗಳಿಗೆ ಒದಗಿಸುವ ಅನುದಾನದ ಮೇರೆಗೆ ಹಣವನ್ನು ನಿಗದಿಪಡಿಸಲು ಕ್ರಮ ಕೈಗೊಳ್ಳಲಾಗುವುದು.

ಅನುಬಂಧ–'ಅ' **LAQ-3142**

Statement showing the details of population in respect of Identified slums and declared slums in the State

Dated: 15.03.2005

Sl. No.	Name of the District	Total No. of slums	No. of declared slums	No. of families	Details of population					Total
					Male	Female	S.C.	S.T.	Otrs	Population
1	2	3	4	5	6	7	8	9	10	11
1.	Bangalore city	473	215	198600	496479	492520	380499	155243	453259	990500
2.	Bangalore Rural	77	61	11755	35904	22869	23137	15752	19884	58773
3.	Bagalkote	93	64	8152	22975	17785	15280	4225	21255	40760
4.	Bellary	149	115	30464	78874	73444	39857	25183	87278	152318
5.	Belagum	98	80	21589	58108	49835	45314	14424	48205	107943
6.	Bidar	71	53	15306	40025	36503	29313	12024	35191	76528
7.	Bijapur	67	51	48104	133837	106683	82725	16015	141780	240520
8.	Chikkamagalore	60	49	9996	28282	21695	10205	13030	26742	49977
9.	Chitradurga	58	57	14164	37937	32882	15918	9242	45659	70819
10.	Chamarajanagara	54	41	8311	20864	20688	12690	13744	15118	41552

172-167

1	2	3	4	5	6	7	8	9	10	11
11.	Davangere	80	72	14294	36201	35272	10200	8364	52907	71472
12.	Dharawada	87	76	25835	71280	57893	33790	16994	78389	129173
13.	Mangalore	28	17	3462	8869	8840	3804	1713	11792	17309
14.	Gadag	72	70	7322	19130	17480	9056	3964	23590	36610
15.	Gulbarga	144	138	35241	79278	96929	83606	26723	65878	176207
16.	Hassan	113	102	28997	78498	66488	29773	15969	99244	144986
17.	Haveri	60	57	7632	21120	17042	8264	5689	24209	38162
18.	Coorg	11	11	1036	2409	1272	1988	181	1512	4481
19.	Kolar	92	83	14614	37870	35198	29987	4059	39022	73068
20.	Koppal	56	46	12446	32039	30192	16807	10177	35247	62231
21.	Mandya	64	52	8796	22159	21823	11790	4368	27824	43982
22.	Mysore	98	79	15967	39844	39990	24075	7825	47934	79834
23.	Raichur	60	54	20283	51791	49622	34558	15969	50886	101413
24.	Shimoga	162	161	28884	72707	71712	16763	10950	116706	144419
25.	Tumkur	97	87	17050	43543	41109	20682	5022	58948	84952
26.	Uttara Kannada	58	32	5495	14467	13006	4250	2039	21184	27473
27.	Udupi	27	25	3474	8632	8736	8060	1289	8019	17368
	Total	**2509**	**1948**	**617269**	**1593122**	**1487108**	**1002391**	**420177**	**1657662**	**3082830**